ಕಾರ್ಯಾಚರಣೆ ಪಡೆಗಳು ಆತನನ್ನು ದಸ್ತಗಿರಿ ಮಾಡಲು ಶಕ್ತಿ ಮೀರಿ ಶೋಧನಾ ಕಾರ್ಯಗಳನ್ನು ನಡೆಸುತ್ತಿವೆ.

ಅಕ್ಕಮಹಾದೇವಿ ಮಹಿಳಾ ಪದವಿಪೂರ್ವ ಕಾಲೇಜು ಕಟ್ಟಡವನ್ನು ಆಸ್ಪತ್ರೆ ಕಟ್ಟಲು ನೀಡಿರುವುದು

522 (896) ಶ್ರೀ ಪ್ರಕಾಶ್ ಖಂಡ್ರೆ (ಭಾಲ್ಕಿ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣದಲ್ಲಿರುವ ಅಕ್ಕಮಹಾದೇವಿ ಮಹಿಳಾ ಪದವಿಪೂರ್ವ ಕಾಲೇಜು ಈಗ ನಡೆಯುತ್ತಿರುವ ನಿವೇಶನ ಹಾಗೂ ಕಟ್ಟಡ ಸರ್ಕಾರದ್ದಾಗಿದ್ದು, ಇದನ್ನು ಆರೋಗ್ಯ ಇಲಾಖೆಗೆ 100 ಹಾಸಿಗೆಗಳ ಆಸ್ಪತ್ರೆ ಕಟ್ಟಲು ನೀಡಿದ ವಿಷಯ ಸರ್ಕಾರದ ಗಮನದಲ್ಲಿದೆಯೇ? ಬಂದಿದ್ದರೇ ಇದನ್ನು ಇನ್ನು ಏಕೆ ಖಾಲಿ ಮಾಡಿಸಲ್ಲಿಲ್ಲ?

ಆ) ಈ ನಿವೇಶನವನ್ನು ಖಾಲಿ ಮಾಡಿಸದಿದ್ದಲ್ಲಿ, ಆಸ್ಪತ್ರೆ ಕಟ್ಟಲು ಅನಾನುಕೂಲವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ? ಬಂದಿದ್ದರೇ, ಇದುವರೆವಿಗೂ ಖಾಲಿ ಮಾಡಲು ಕ್ರಮಕೈಗೊಳ್ಳದಿರಲು ಕಾರಣವೇನು? ಯಾವಾಗ ಖಾಲಿ ಮಾಡಲಾಗುವುದು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು

ಆಸ್ಪತ್ರೆ ಅಭಿವೃದ್ಧಿಗೆ ಅಗತ್ಯವಿರುವ ಒಟ್ಟು 5904.72 ಚದರ ಮೀಟರ್ ವಿಸ್ತೀರ್ಣದ ಜಮೀನನ್ನು ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೀದರ್ ಇವರು ದಿನಾಂಕ 11-9-2000ರಂದು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ. ಬೀದರ್ ಇವರಿಗೆ ಲಿಖಿತ ಮೂಲಕ ಹಸ್ತಾಂತರಿಸಿರುತ್ತಾರೆ. ಈ ವಿಸ್ತೀರ್ಣದ ಒಂದು ಭಾಗದಲ್ಲಿ ಶ್ರೀ ಶಾಂತಿ ವರ್ಧಕ ಶಿಕ್ಷಣ ಸಂಸ್ಥೆಯು ಪದವಿಪೂರ್ವ ಕಾಲೇಜು ನಡೆಸುತ್ತಿದ್ದು, ಇದುವರೆವಿಗೂ ಆಸ್ಪತ್ರೆ ಕಟ್ಟಡಕ್ಕೆ ಅಗತ್ಯವಿರುವ ಜಮೀನನ್ನು ಔತಿಕವಾಗಿ ತೆರವುಗೊಳಿಸಿಕೊಟ್ಟಿರುವುದಿಲ್ಲ. ಈ ಬಗ್ಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿ, ಬೀದರ್ ಇವರು ಹಲವು ಸೂಚನಾ ಪತ್ರಗಳನ್ನು ಸದರಿ ಸಂಸ್ಥೆಗೆ ನೀಡಿರುತ್ತಾರೆ. ಈ ತಮ್ಮಧ್ಯೆ ಶ್ರೀ ಶಾಂತಿ ವರ್ಧಕ ವಿದ್ಯಾ ಸಂಸ್ಥೆಯು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಪಿಟಿಷನ್ ಸಂಖ್ಯೆ 27753/2002 ಮತ್ತು ರಿಟ್ ಪಿಟಿಷನ್ ಸಂಖ್ಯೆ 29753/2002ಗಳನ್ನು ಸಲ್ಲಿಸಿದ್ದು, ಘನ ನ್ಯಾಯಾಲಯವು ತಡೆ ಆದೇಶವನ್ನು ನೀಡಿದ್ದು, ಮುಂದುವರೆಸಿದೆ. ಆದ್ದರಿಂದ ಸದರಿ ನಿವೇಶನವನ್ನು ಖಾಲಿ ಮಾಡಿಸಲು ಸಾಧ್ಯವಾಗಿಲ್ಲ.

ಆ) ಹೌದು

ಕರ್ನಾಟಕ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ತೆರವಾದ ಮೇಲೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಗ್ರಾಮೀಣಾಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಂದಿರುವ ಹಣ.

1227 (1436) ಶ್ರೀ ಕೃಷ್ಣಪ್ಪ ವಿ (ದೊಡ್ಡಬಳ್ಳಾಪುರ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಿಂದ ಗ್ರಾಮೀಣಾಭಿವೃದ್ಧಿಗೆ ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಬಿಡುಗಡೆಯಾಗಿರುವ ಹಣವೆಷ್ಟು?